**ದಿಃ06.02.2025 ರ ಆದೇಶದ ಪ್ರಕಾರ ಸಾಕ್ಷಿಯನ್ನು ಪಾಟೀ ಸವಾಲಿಗಾಗಿ ಪುನಃ ಕರೆಸಲಾಯಿತು.** ಸಾಕ್ಷಿಗೆ ದಿಃ**09.04.2026** ರಂದು ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ ಕೆ ಎಲ್ ವಕೀಲರಿಂದಃ**

3. ನಾನು ನಾರಾಯಣಘಟ್ಟದಲ್ಲಿ ಹೊಟೇಲ್ ವ್ಯಾಪಾರ ಮಾಡುತ್ತೇನೆ. ನಾನು ಹೊಟೇಲ್ ಗೆ ಬೆಳಗ್ಗೆ 07.30 ಘಂಟೆಗೆ ಹೋಗುತ್ತೇನೆ. ಹೊಟೇಲ್ ಅನ್ನು ರಾತ್ರಿ 09.30 ಘಂಟೆಗೆ ಮುಚ್ಚುತ್ತೇನೆ. ಸಾಮಾನ್ಯವಾಗಿ ನಾನು ಬೆಳಗ್ಗೆ 7.30 ರಿಂದ ರಾತ್ರಿ 09.30 ರವರೆಗೆ ಹೊಟೇಲ್ ನಲ್ಲಿ ಇರುತ್ತೇನೆ. ಸಾಕ್ಷಿ ಮುಂದುವರಿದು, ಏನಾದರೂ ಸಾಮಾನು ತರಬೇಕಾದರೆ ಮಾತ್ರ ಹೊರಗೆ ಹೋಗುತ್ತೇನೆ ಎಂದು ಹೇಳುತ್ತಾರೆ. ನಾರಾಯಣಘಟ್ಟದಲ್ಲಿರುವ ನನ್ನ ಹೊಟೇಲ್ ನಿಂದ ರಾಮಸಾಗರ ಬಸ್ ಸ್ಟಾಪ್ ಸುಮಾರು 3 ಕಿಮೀ ದೂರದಲ್ಲಿರುತ್ತದೆ.

4. 29.01.2015 ರಂದು ನಾನು ಬೆಳಗ್ಗೆ 7.00 ಘಂಟೆಗೆ ಮನೆಯಿಂದ ಹೊರಟು ಆ ದಿನ ಚಂದಾಪುರಕ್ಕೆ ಸಾಮಾನು ತರಲು ಹೋಗಬೇಕಾಗಿದ್ದರಿಂದ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆನು. ಅಂದು ರಾಮಸಾಗರ ಬಸ್ ಸ್ಟಾಪಿನ ಬಳಿ ಸುಮಾರು 12-15 ಜನರು ಇದ್ದರು. ಅವರ ಪೈಕಿ ಮೂರು ಜನ ನನಗೆ ಪರಿಚಿತರು. ನಾರಾಯಣಘಟ್ಟದಲ್ಲಿರುವ ನನ್ನ ಮನೆಯಿಂದ ರಾಮಸಾಗರ ಬಸ್ ಸ್ಟಾಪ್ ನವರೆಗೆ ಮೂರು ಕಿಮೀ ಕ್ರಮಿಸಲು 6 ರಿಂದ 10 ನಿಮಿಷ ಬೇಕಾಯಿತು. ನಾನು ಅಂದು ನನ್ನ ಸ್ವಂತ ಪಲ್ಸರ್ ಬೈಕಿನಲ್ಲಿ ಹೋಗುತ್ತಿದ್ದೆನು. ನನ್ನ ದ್ವಿಚಕ್ರ ವಾಹನ ಸಂಖ್ಯೆ ನನಗೆ ಈಗ ಹೇಳಲು ಆಗುವುದಿಲ್ಲ ಅದನ್ನು ಈಗ ಮಾರಾಟ ಮಾಡಿರುತ್ತೇನೆ.

5. ಆರೋಪಿತರಾದ ಸಂದೀಪ್ ಮತ್ತು ಇನ್ನೊಬ್ಬ ಶರತ್ ನನ್ನು ಗಾಡಿಯನ್ನು ಎಳೆದುಕೊಂಡು ಮೊದಲು ಕೈಯಿಂದ ಹೊಡೆದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಪ್ರಾಸಾ-1 ಪ್ರತಾಪ್, ಪ್ರಾಸಾ-2 ದಿಲೀಪ್ ಮತ್ತು ಪ್ರಾಸಾ-10 ಶರತ್ ಇವರು ನನ್ನ ಸ್ನೇಹಿತರು ಎಂದರೆ ಪ್ರಾಸಾ-10 ನನ್ನ ಆತ್ಮೀಯ ಸ್ನೇಹಿತರು ಹಾಗೂ ಪ್ರಾಸಾ-1 ಮತ್ತು 2 ಇವರು ನನ್ನ ಮಾವನ ಮಕ್ಕಳು ಇರುತ್ತಾರೆ.

6. ನಾನು ಗಲಾಟೆ ಬಿಡಿಸಲು ಪ್ರಯತ್ನಿಸಿದೆ ಆದರೆ ಆರೋಪಿತರು ಬಹಳ ಜನರು ಇದ್ದುದ್ದರಿಂದ ಅವರು ನನ್ನನ್ನು ತಡೆದರು. ಪ್ರಾಸಾ-1 ಮತ್ತು 2 ನನ್ನ ಸಂಬಂಧಿಕರು ಹಾಗೂ ಪ್ರಾಸಾ-10 ಇವರು ನನ್ನ ಸ್ನೇಹಿತ ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಲೀಪಿನ ಕಾಲಿನ ಮೇಲೆ ಒಬ್ಬ ವ್ಯಕ್ತಿ ಕಲ್ಲು ಎತ್ತು ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಆರೋಪಿತರಾದ ಸಂದೀಪ್ ಮತ್ತು ಇನ್ನೊಬ್ಬ ಶರತ್ ನನ್ನು ಗಾಡಿಯನ್ನು ಎಳೆದುಕೊಂಡು ಮೊದಲು ಕೈಯಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸಂದೀಪ ರಾಡಿನಿಂದ ಶರತ್ ಗೆ ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಆಗ ಅಲ್ಲಿಗೆ ಪ್ರತಾಪ್ ಮತ್ತು ದಿಲೀಪ್ ಇನ್ನೊಂದು ಗಾಡಿಯಲ್ಲಿ ಬಂದರು ಹಾಗೂ ನಂತರ ಆರೋಪಿತರೆಲ್ಲರೂ ಸೇರಿಕೊಂಡು ಅವರಿಬ್ಬರಿಗೆ ಕೈಯಲ್ಲಿ ಮತ್ತು ಕಲ್ಲಿನಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರತಾಪ್ ಮತ್ತು ದಿಲೀಪ್ ಇವರು ಚಂದಾಪುರಕ್ಕೆ ಹೋಗಲೆಂದು ಮುಂದೆ ಹೋಗಿದ್ದು ಆರೋಪಿತರು ಹೋಗಿ ಎಳೆದುಕೊಂಡು ಬಂದು ಅವರಿಗೆ ಹೊಡೆದರು ಎಂದು ಹೇಳುತ್ತಾರೆ. ಪ್ರತಾಪ್ ಮತ್ತು ದಿಲೀಪ್ ಇವರು ಚಂದಾಪುರಕ್ಕೆ ಹೋಗಲೆಂದು ಮುಂದೆ ಹೋಗಿದ್ದು ಆರೋಪಿತರು ಹೋಗಿ ಎಳೆದುಕೊಂಡು ಬಂದು ಅವರಿಗೆ ಹೊಡೆದರು ಎಂಬ ವಿಷಯವನ್ನು ಪೋಲಿಸರಿಗೆ ಹೇಳಿರುತ್ತೇನೆ. ನಾನು ಸ್ಥಳಕ್ಕೆ ಹೋದ 10-15 ನಿಮಿಷದಲ್ಲಿ ಪ್ರತಾಪ್ ಮತ್ತು ದಿಲೀಪ್ ಇವರನ್ನು ಆರೋಪಿತರು ಎಳೆದು ತಂದರು.

7. ನಾರಾಯಣಘಟ್ಟದಿಂದ ಚಂದಾಪುರಕ್ಕೆ ಹೋಗುವ ರಸ್ತೆಯಲ್ಲಿ ಅನೇಕ ವಾಹನಗಳು ದಟ್ಟಣೆ ಇರುವ ರಸ್ತೆಯಾಗಿರುತ್ತದೆ.

8. ಘಟನೆಯ ನಂತರ ನಾನು ಊರಿಗೆ ಹೋಗಿ ಅಲ್ಲಿ ಜನರನ್ನು ಕರೆದುಕೊಂಡು ನೇರವಾಗಿ ಪೋಲಿಸ್ ಠಾಣೆಗೆ ಹೋಗಿದ್ದೆ. ದೊಣ್ಣೆ ಸಂದೀಪನ ಕೈಯಲ್ಲಿ ಇತ್ತು. ರಾಡ್ ಮತ್ತು ಕಲ್ಲು ಯಾರ ಕೈಯಲ್ಲಿ ಇತ್ತು ಎಂದು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರಿದು ಗಲಾಟೆಯಲ್ಲಿ ಸ್ವಲ್ಪ ನನಗೆ ಗಾಬರಿಯಾಗಿದ್ದರಿಂದ ಅವುಗಳು ಯಾರ ಕೈಯಲ್ಲಿ ಇತ್ತು ಎಂದು ಗಮನಿಸಿಲ್ಲ ಎಂದು ಹೇಳುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆಯನ್ನು ನೋಡದೇ ಇದ್ದರೂ ಸಹ ಫ್ರಾಸಾ-1, 2 ಮತ್ತು 10 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಹುಡುಗಿಯರನ್ನು ಚುಡಾಯಿಸುವ ವಿಷಯವಾಗಿ ದಿ:27.01.2015 ಮತ್ತು 28.01.2015 ರಂದು ಬಸ್ಸಿನಲ್ಲಿ ಗಲಾಟೆ ಆದ ಹಿನ್ನೆಲೆಯಲ್ಲಿ ದ್ವೇಷದಿಂದ ಆರೋಪಿತರ

ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಈ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು